ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

19

ಇಲಾಖೆ / ವಿಷಯ : DEPARTMENT / SUBJECT: ಕಂದಾಯ - ಭೂ ಕಂದಾಯ ತಿದ್ದುಪಡಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 26/9/20

# ಬಿ ಖರಾಬು ಸಕ್ರಮ ವಿಧೇಯಕಕ್ಕೆ ಅಸ್ತು

## ಮಾರ್ಗಸೂಚಿ ದರದ ದುಪ್ಪಟ್ಟು ಶುಲ್ಕ ನೀಡಿ ಸಕ್ರಮಕ್ಕೆ ಮಾಲೀಕರಿಗೆ ಅವಕಾಶ

**ವಿಧಾನಸಭೆ:** ಬಿ ಖರಾಬು ಜಾಗದ ಹಾಲಿ ಅನುಭೋಗದಾರರಿಗೆ ಮಾರ್ಗಸೂಚಿ ದರಕ್ಕಿಂತ ದುಪ್ಪಟ್ಟು ಶುಲ್ಕ ಪಡೆದು ಖಾಯಂ ಸ್ವಾಧೀನಕ್ಕೆ ಕೊಡುವ ಉದ್ದೇಶದ 'ಕರ್ನಾಟಕ ಭೂ ಕಂದಾಯ ತಿದ್ದುಪಡಿ' ವಿಧೇಯಕಕ್ಕೆ ಅನುಮೋದನೆ ದೊರೆತಿದೆ.

ರಾಜ್ಯಾದ್ಯಂತ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಇದು ಅನ್ವಯವಾಗಲಿದ್ದು ಪ್ರಸ್ತುತ ಅನುಭೋಗದಲ್ಲಿರುವ ಜಮೀನಿನಲ್ಲಿ ಬಿ ಖರಾಬು ಇದ್ದರೆ ಅದಕ್ಕೆ ಶುಲ್ಕ ಪಾವತಿಸಿ ಸಕ್ರಮ ಮಾಡಿಕೊಳ್ಳಬಹುದಾಗಿದೆ.

ವಿಧೇಯಕ ಮಂಡಿಸಿದ ಕಂದಾಯ ಸಚಿವ ಆರ್.ಅಶೋಕ್, ಬಿಬಿಎಂಪಿ ಸೇರಿ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆಗಳ ವ್ಯಾಪ್ತಿಯ ನಿಗದಿತ ಪ್ರದೇಶದಲ್ಲಿ ಕೈಗಾರಿಕೆ, ಶಿಕ್ಷಣ ಸೇರಿ ವಿವಿಧ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಂಡಿರುವ ಹಾಗೂ ಖರೀದಿ ಮಾಡಿರುವ ಜಮೀನುಗಳಲ್ಲಿನ ಬಿ ಖರಾಬು ಜಾಗ ವರ್ಷಗಳಿಂದ ಆಯಾ ಮಾಲೀಕರ ಅನುಭೋಗದಲ್ಲಿದ್ದಾರೆ. ಆ ಜಾಗವನ್ನು ಸರ್ಕಾರ ವಾಪಸ್ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಅದನ್ನು ಮಾರ್ಗಸೂಚಿ ದರದ ದುಪ್ಪಟ್ಟು ಶುಲ್ಕ ಪಡೆದು ಅವರಿಗೇ ಹಕ್ಕುಪತ್ರ ಕೊಡುವುದು ಸೂಕ್ತ ಎಂಬ ಕಾರಣಕ್ಕೆ ಈ ವಿಧೇಯಕ ತರಲಾಗಿದೆ ಎಂದು ಹೇಳಿ ಅಂಗೀಕಾರ ಪಡೆದುಕೊಂಡರು.

**ರೈತರ ಜಮೀನನ್ನೂ ಸಕ್ರಮ ಮಾಡಿಕೊಡಿ:** ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಸ್ಪೀಕರ್ ರಮೇಶ್‌ಕುಮಾರ್, ಜೆಡಿಎಸ್‌ನ ಶಿವಲಿಂಗೇಗೌಡ ಸೇರಿದಂತೆ ಬಿಜೆಪಿಯ ಬಹುತೇಕ ಸದಸ್ಯರು ಗ್ರಾಮೀಣ ಭಾಗದಲ್ಲಿ ರೈತರು ಅನುಭೋಗದಲ್ಲಿರುವ ಜಮೀನಿನಲ್ಲಿರುವ ಬಿ ಖರಾಬು ಇದೇ ರೀತಿ ಮಾರ್ಗಸೂಚಿ ದರದ ದುಪ್ಪಟ್ಟು ಪಡೆದು ಸಕ್ರಮ ಮಾಡಿಕೊಡಿ ಎಂದು ಸಲಹೆ ನೀಡಿದರು.



ನಗರ ಪ್ರದೇಶಗಳಲ್ಲಿ ಮಾತ್ರ ಅನುಕೂಲ ಮಾಡಿಕೊಟ್ಟು ರೈತರಿಗೆ ಬಿಟ್ಟರೆ ಹೇಗೆ? ಬಹುತೇಕ ಕಡೆ ಹಳ್ಳ ದಿಣ್ಣೆ ಬೆಟ್ಟದಂತಿದ್ದ ಬಿ ಖರಾಬು ಜಾಗವನ್ನು ರೈತರು ಸಮತಟ್ಟು ಮಾಡಿ ಕೃಷಿ ಯೋಗ್ಯ ಮಾಡಿದ್ದಾರೆ. ಹೀಗಾಗಿ, ರೈತರಿಗೂ ಇಂತಹ ಕಾಯ್ದೆ ತಂದು ಅನುಕೂಲ ಮಾಡಿದರೆ ಪುಣ್ಯ ಬರುತ್ತದೆ ಎಂದು ಪಕ್ಷಾತೀತವಾಗಿ ಒತ್ತಾಯಿಸಿದರು.

ಈ ಕುರಿತು ಪರಿಶೀಲಿಸಿ ಮುಂದಿನ ಅಧಿವೇಶನದೊಳಗೆ ವಿಧೇಯಕ ತರುವುದಾಗಿ ಕಂದಾಯ ಸಚಿವ ಆರ್.ಅಶೋಕ್ ಭರವಸೆ ನೀಡಿದರು.

# ಬಿಡಿಎ ವ್ಯಾಪ್ತಿ ಅನಧಿಕೃತ ಮನೆ-ಕಟ್ಟಡ ಸಕ್ರಮಕ್ಕೆ ಒಪ್ಪಿಗೆ

**ವಿಧಾನಸಭೆ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಮನೆಗಳ ಸಕ್ರಮ ಉದ್ದೇಶದ 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ' ವಿಧೇಯಕಕ್ಕೆ ಅಂಗೀಕಾರ ದೊರೆತಿದೆ.

600 ಚದರಡಿಯಿಂದ 4000 ಚದರಡಿವರೆಗೆ 12 ವರ್ಷಗಳಿಂದ ನಿರ್ಮಿಸಿಕೊಂಡಿರುವ ಮನೆ ಅಥವಾ ಕಟ್ಟಡ ಸಕ್ರಮಗೊಳ್ಳಲಿದ್ದು, 600 ಚದರಡಿಗೆ ಮಾರ್ಗಸೂಚಿ ದರದ ಶೇ.10, 1200 ಚದರಡಿವರೆಗೆ ಶೇ.20, 2400 ಚದರಡಿಯವರೆಗೆ ಶೇ.40 ಹಾಗೂ 4000 ಚದರಡಿವರೆಗೆ ಶೇ. 50 ದಂಡ ಪಾವತಿಸಿ ಸಕ್ರಮಗೊಳಿಸಿಕೊಳ್ಳಬಹುದಾಗಿದೆ. ಇದಕ್ಕಿಂತ ಹೆಚ್ಚು ವಿಸ್ತೀರ್ಣಕ್ಕೆ ಅವಕಾಶ ಇರುವುದಿಲ್ಲ ಎಂದು ಸಿಎಂ ಪರವಾಗಿ ಸಚಿವ ಜೆ.ಸಿ.ಮಾಧುಸ್ವಾಮಿ ವಿಧೇಯಕ ಮಂಡಿಸಿದರು.

ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, ಇದು ಲೂಟಿಕೋರರಿಗೆ ಅವಕಾಶ ಮಾಡಿಕೊಡುವ ವಿಧೇಯಕ. ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ ಜಾಗದಲ್ಲಿ ಮನೆ ಕಟ್ಟಡ ಕಟ್ಟಿರುವವರು ಬಡವರು ಯಾರೂ ಇಲ್ಲ, ಅವರಿಗೇಕೆ ಕರುಣೆ. ಮಾರುಕಟ್ಟೆ ದರ ಪಡೆದು ಸಕ್ರಮ ಮಾಡಿ ಎಂದು ಒತ್ತಾಯಿಸಿದರು.

ಬಿಜೆಪಿಯ ಕೆ.ಜಿ.ಬೋಪಯ್ಯ ಅವರು, ಬಿಡಿಎ ಸ್ವಾಧೀನಪಡಿಸಿಕೊಂಡ ಜಾಗದಲ್ಲಿ ಅಕ್ರಮವಾಗಿ ಮನೆಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟ ಉಪ ನೋಂದಣಾಧಿಕಾರಿಗಳು ಹಾಗು ಇತರೆ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಶಿಫಾರಸು ಮಾಡಲಾಗಿತ್ತು. ಆ ಕೆಲಸ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಂದಾಯ ಸಚಿವ ಆರ್.ಅಶೋಕ್ ಅವರು, ಅಕ್ರಮ-ಸಕ್ರಮ ವಿಚಾರಕ್ಕೆ ಬಂದಾಗ ತಮ್ಮ ತಮ್ಮ ಜಿಲ್ಲೆಯದಾದರೆ ಸರಿ, ಬೇರೆ ಜಿಲ್ಲೆಯದಾದರೆ ಸರಿಯಿಲ್ಲ ಎಂದು ಹೇಳಿದರೆ ಹೇಗೆ? ಬಡವರೂ ಸಾಕಷ್ಟು ಜನ ಮನೆ ಕಟ್ಟಿಕೊಂಡಿದ್ದಾರೆ. ಮಾರ್ಗಸೂಚಿ ದರವೇ ಮಾರುಕಟ್ಟೆ ದರಕ್ಕಿಂತ ಕೆಲವೆಡೆ ಹೆಚ್ಚಾಗಿದೆ ಎಂದು ಸಮಜಾಯಿಷಿ ನೀಡಿದರು. ಬಿಜೆಪಿಯ ಸತೀಶ್ ರೆಡ್ಡಿ ಧ್ವನಿಗೂಡಿಸಿದರು.

ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಅವರು, ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಎಷ್ಟು ವಿಧೇಯಕಗಳಿದ್ದರೂ ತಂದು ಒಟ್ಟಿಗೆ ಒಪ್ಪಿಗೆ ಪಡೆದುಕೊಂಡುಬಿಡಿ ಎಂದು ವ್ಯಂಗ್ಯವಾಡಿದರು. ಅಂತಿಮವಾಗಿ ಜೆ.ಸಿ. ಮಾಧುಸ್ವಾಮಿಯವರು ವಿಧೇಯಕದ ಅಗತ್ಯತೆ ಬಗ್ಗೆ ವಿವರಿಸಿ ಅಂಗೀಕಾರ ಪಡೆದರು.